# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,**

**ಮಹದೇವಪುರ ವಲಯ, ಬೆಂಗಳೂರು – 560 113.**

ಸಂಖ್ಯೆ:ಕಿ.ಅ/ವಾರ್ಡ್–25/ಪಿ.ಆರ್/ /2021–22 ದಿನಾಂಕ:– 27.09.2021

## "ಸಭಾ ಸೂಚನಾ ಪತ್ರ"

**ವಿಷಯ:–** ದಿನಾಂಕ:01.10.2021 ಶುಕ್ರವಾರ ಪೂರ್ವಹ್ನ 11.00 ಗಂಟೆಗೆ ಹೊರಮಾವು ಉಪವಿಭಾಗ ವಾರ್ಡ್ ನಂ.25 ರ ಕಛೇರಿಯಲ್ಲಿ ನಡೆಯುವ ಸಭೆಗೆ ಹಾಜರಾಗುವ ಬಗ್ಗೆ.

**ಉಲ್ಲೇಖ:–**ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020–21, ದಿನಾಂಕ:21/09/2020.

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿಗಳು ವಾರ್ಡ್ ನಂ.25 ರ ಹೊರಮಾವು ಉಪವಿಭಾಗಕ್ಕೆ ಸಂಬಂಧಿಸಿದ ಮಾಹಿತಿಗಳೊಂದಿಗೆ ದಿನಾಂಕ:01.10.2021 ಶುಕ್ರವಾರ ಪೂರ್ವಹ್ನ 11.00 ಗಂಟೆಗೆ ವಾರ್ಡ್ ನಂ.25 ರ ಸ.ಕಾ.ಅ ಹೊರಮಾವು ಕಛೇರಿಗೆ ಹಾಜರಾಗಲು ಕೋರಲಾಗಿದೆ.

**ವಿಶೇಷ ಸೂಚನೆ:–** Covid–19 ಇರುವುದರಿಂದ ಎಲ್ಲಾರು ಕಡ್ಡಾಯವಾಗಿ ಸ್ಯಾನಿಟೈಜರ್ ಬಳಸಿ, ಮಾಸ್ಕ ಧರಿಸಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.

ಸಂಚಾಲಕರು
ಮತ್ತು ಸಹಾಯಕ ಅಭಿಯಂತರರು
ಹೊರಮಾವು ವಾರ್ಡ್ ಸಂಖ್ಯೆ–25.

**ರವರಿಗೆ.**

1. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ವಿಭಾಗ, ಬಿಬಿಎಂಪಿ.
2. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಮಹದೇವಪುರ ವಲಯ) ಬಿಬಿಎಂಪಿ.
3. ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ. ಸಿಎಂಸಿ
4. ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ. 110 ಹಳ್ಳಿಗಳ ವ್ಯಾಪ್ತಿ.
5. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
6. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು ಬಿಬಿಎಂಪಿ.
7. ಕಾರ್ಯಪಾಲಯ ಅಭಿಯಂತರರು, ಕೆರೆಗಳ ವಿಭಾಗ, ಬಿಬಿಎಂಪಿ.
8. ಕಾರ್ಯಪಾಲಯ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿಬಿಎಂಪಿ.
9. ಆರೋಗ್ಯ ವೈದ್ಯಾಧಿಕಾರಿಗಳು, ಕೆ.ಆರ್.ಪುರ.
10. ಸಹಾಯಕ ನಿರ್ದೇಶಕರು, ನಗರ ಯೋಜನೆ, ಮಹದೇವಪುರ ವಲಯ. ಬಿಬಿಎಂಪಿ.
11. ಡಾ//ಶಿವಕುಮಾರ್. ಆರೋಗ್ಯಾಧಿಕಾರಿಗಳು, ಕೆ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರ
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಕೆ.ಆರ್.ಪುರ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪವಿಭಾಗ, ಬಿಬಿಎಂಪಿ.
14. ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಆರ್.ಟಿ.ನಗರ.
15. ಕಲ್ಯಾಣಾಧಿಕಾರಿಗಳು, ಮಹದೇವಪುರ ವಲಯ, ಬಿಬಿಎಂಪಿ.
16. ಪೊಲೀಸ್ ಠಾಣೆ ಅಧಿಕಾರಿ ಹೆಣ್ಣೂರು/ಕೊತ್ತನೂರು/ರಾಮಮೂರ್ತಿನಗರ.
17. ಪೊಲೀಸ್ ಇನ್ಸ್‌ಪೆಕ್ಟರ್ [illegible]

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113**

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021-22 ದಿನಾಂಕ: 01.10.2021

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ರ ಆದೇಶದಂತೆ ಹೊರಮಾವು ವಾರ್ಡ್ ಸಂಖ್ಯೆ-25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:-01.10.2021 ರಂದು ಬೆಳಿಗ್ಗೆ 11.00ಗಂಟೆಗೆ ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ-ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ಚಂದ್ರಶೇಖರ್.ಎ.ಜಿ | ಸ.ಕಾ.ಅ (ಹೊರಮಾವು ಉಪ-ವಿಭಾಗ) | 9844587466 |
| 3 | ಶ್ರೀ.ರಮೇಶ್ | ಕಿರಿಯ ಅಭಿಯಂತರರು | |
| 4 | ಶ್ರೀ. ಸಂಜಯ್ ಕುಮಾರ್.ಎಸ್ | ಹಿರಿಯ ಆರೋಗ್ಯ ಪರಿವೀಕ್ಷಕರು | 9742919411 |
| 5 | ಶ್ರೀ.ಕೋದಂಡರಾಮ | ಸ್ಟ್ರೀಟ್ ಲೈಟ್ ಗುತ್ತಿಗೆದಾರರು | |
| 6 | ಶ್ರೀ.ದಯಾನಂದ್ (ಪ್ರೆಸಿಡೆಂಟ್) | ದಾಸಪ್ಪ ಲೇಔಟ್ | |
| 7 | ಶ್ರೀ.ಕೇಶವ್ | ದಾಸಪ್ಪ ಲೇಔಟ್ | |
| 8 | ಶ್ರೀ.ರಾಧಕೃಷ್ಣ | ದಾಸಪ್ಪ ಲೇಔಟ್ | |
| 9 | ಶ್ರೀ.ಎಸ್ಶ್ರೀನಿವಾಸ | ದಾಸಪ್ಪ ಲೇಔಟ್ | |
| 10 | ಶ್ರೀ.ಷಣ್ಮುಗಂ | ಸರ್.ಎಂ.ವಿ ನಗರ | |
| 11 | ಶ್ರೀ.ಮೂರ್ತಿ | | |
| 12 | ಶ್ರೀ.ವಿನಯ್ | ಸಮಾಜ ಕಲ್ಯಾಣ ಇಲಾಖೆ | |
| 13 | ಶ್ರೀ.ಉಮೇಶ್.ಬಿ.ಕೆ | | |
| 14 | ಶ್ರೀಮತಿ.ನಾಗರತ್ನಮ್ಮ | | |
| 15 | ಶ್ರೀ.ಸಂಪತ್ ಕುಮಾರ್ | ಚೇಳಕೆರೆ | |

**ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.**

Scanned with CamScanner

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-**

**ಶ್ರೀ. ದಯಾನಂದ ಶ್ರೀ.ಕೇಶವ್ ದಾಸಪ್ಪ ಲೇಔಟ್ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ರವರು ಮಾತನಾಡಿ ದಾಸಪ್ಪ ಬಡಾವಣೆಯಲ್ಲಿ ಡ್ರೈನ್/ರಾಜಕಾಲುವೆ ಸ್ವಚ್ಚಗೊಳಿಸಲು ಫೆನ್ಸಿಂಗ್ ಮಾಡಿ ತಡೆಗೋಡೆ ನಿರ್ಮಿಸಲು ಕೋರಿದ್ದು, ಈ ಕೆಲಸ ಕಾರ್ಯಗಳನ್ನು ಈ ತಿಂಗಳಲ್ಲಿ ತೊಡಗಿಸಲು ಕೋರಿರುತ್ತಾರೆ. ಮತ್ತು 2018-19ರ ಕಲ್ಯಾಣ ಇಲಾಖೆಯಿಮದ (ಬಿಬಿಎಂಪಿ) ರವರಿಂದ 2018-19 ನೇ ಸಾಲಿಗೆ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲು ಸಲ್ಲಿಸಿರುವ ಅರ್ಜಿಗಳ ಕ್ರಮ ತೆಗೆದುಕೊಂಡಿರುವ ವರದಿಯ ಬಗ್ಗೆ ಚರ್ಚಿಸುತ್ತಾ ಇನ್ನುಳಿದ ಅಭ್ಯರ್ಥಿಗಳಿಗೆ ನಿಯಮಾನುಸಾರ ಈ ಸಾಲಿನಲ್ಲಿ ಲ್ಯಾಪ್‌ಟಾಪ್ ವಿತರಿಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರು ಕ್ರಮ ಕೈಗೊಳ್ಳಲು ಸಭೆಯಲ್ಲಿ ಸೂಚಿಸಲಾಗಿದೆ.

**ಶ್ರೀ.ಸರ್.ಎಂ.ವಿ ನಗರ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ರವರು ಮಾತನಾಡಿ ದಾಸಪ್ಪ ಲೇಔಟ್, ಬಿ.ಎಸ್.ವಿ ಲೇಔಟ್, ಮುನಿನಂಜಪ್ಪ ಲೇಔಟ್, ಬೆಸ್ಕಾಂ, ಎಲ್ & ಟಿ ಸಹಯೋಗದಿಂದ ಓವರ್‌ಹೆಡ್ ಕೇಬಲ್ ಅಳವಡಿಸಲು ಹೆಚ್.ಡಿ.ಡಿ ಮುಖಾಂತರ ಅಳವಡಿಸಲು ಅನುಮತಿಗಾಗಿ ಕೋರಿದ್ದು, ಮೇಲಿನ ಬಡಾವಣೆಗಳಲ್ಲಿ ರಸ್ತೆಗಳು ಇರುವ ಡಾಂಬರು ರಸ್ತೆ ಹಾಗೂ ಹೊಸ ಡಾಂಬರು ರಸ್ತೆಯನ್ನು ಸಹ ಅಗೆದಿದ್ದು, ಇದರಿಂದ ಅಪಘಾತ ಸಂಭವಿಸಿದ್ದು ಇವರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ. ಮತ್ತು ದಾಸಪ್ಪ ಲೇಔಟ್ ಇಲ್ಲಿ ಹಾಲಿ ಕೊಳವೆಬಾವಿ ಮೋಟರ್ ಪಂಪ್ ಮಾತ್ರ ಇದ್ದು, ಈ ಬಡಾವಣೆಯಲ್ಲಿ ಕಾವೇರಿ ನೀರು ಸಮರ್ಪಕವಾಗಿ ಬರುತ್ತಿದ್ದು, ಹಾಲಿ ಇರುವ ಕೊಳವೆಬಾವಿ ಸುಸ್ಥಿತಿಯಲ್ಲಿದ್ದು, ಕೊಳವೆಸಾಲುಗಳನ್ನು ಅಳವಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ನೀರು ಸರಬರಾಜು ನಿರ್ವಹಣೆ ಮಾಡುತ್ತಿದ್ದು, ಕ್ರಮ ವಹಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಪತ್ರ ಬರೆಯಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ / ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ಷಣ್ಮುಗಂ ವಿಜಯಬ್ಯಾಂಕ್ ಕಾಲೋನಿ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ರವರು ಮಾತನಾಡಿ ಹಾಲಿ ಇರುವ ಓವರ್‌ಟ್ಯಾಂಕ್ ಶಿಥಿಲಗೊಂಡು ಅವ್ಯವಸ್ಥ ಸ್ಥಿತಿಯಲ್ಲಿರುತ್ತದೆ. ಪಾಲಿಕೆ ವತಿಯಿಂದ ಕಸ/ಡೆಬ್ರಿಸ್‌ನ್ನು ತೆಗೆಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ಮತ್ತು ಎಸ್.ಡಬ್ಲ್ಯೂ.ಎಂ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ. ಸಂಪತ್ ಕುಮಾರ್, ಚೇಳಿಕೆರೆ ಗ್ರಾಮಸ್ಥರು:-** ರವರು ಮಾತನಾಡಿ ವಾರ್ಡ್ ಸಂಖ್ಯೆ 25 ರ ಚೇಳಿಕೆರೆ ಗ್ರಾಮದಲ್ಲಿ ವಾಟರ್‌ಟ್ಯಾಂಕ್ (ಓವರ್‌ಹೆಡ್ ಟ್ಯಾಂಕ್) ಶಿಥಿಲಾವಸ್ಥೆಯಲ್ಲಿದ್ದು, ಒಡೆದು ಹಾಕಲು ಮತ್ತು ಈ ಸ್ಥಳದಲ್ಲಿ ಹೊಸ ಟ್ಯಾಂಕ್‌ನ್ನು ನಿರ್ಮಾಣ ಮಾಡಿಕೊಡಲು ಹಿಂದಿನ ಸಭೆಯಲ್ಲಿ ಕೋರಿಕೊಂಡಿರುತ್ತಾರೆ. ಅದರಂತೆ ಅನುಮೋದನೆ ಪಡೆದಿರುವುದರಿಂದ 15 ದಿನಗಳ ಕಾಲವಕಾಶದಲ್ಲಿ ಸದರಿ ಕೆಲಸವನ್ನು ಪ್ರಾರಂಭಿಸಬೇಕೆಂದು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಹೊರಮಾವು ಉಪ-ವಿಭಾಗಕ್ಕೆ ಸಂಬಂಧಿಸಿದಂತೆ ಬೃಹತ್ ರಸ್ತೆಗಳ ವಿಭಾಗ, ಬಾಣಸವಾಡಿ, ನಾಗವಾರ, ಆರಕ್ಷಕ ಸಿಬ್ಬಂಧಿಗಳು- ರಾಮಮೂರ್ತಿನಗರ, ಹೆಣ್ಣೂರು ಪೋಲೀಸ್‌ಠಾಣೆ, ಆರಕ್ಷಕ ಸಿಬ್ಬಂಧಿಗಳು ಸಂಚಾರ ವಿಭಾಗ-ಕೆ.ಆರ್.ಪುರ, ರಾಮಮೂರ್ತಿನಗರ, ಬಾಣಸವಾಡಿ ಹಾಗೂ ಸಹಾಯಕ ಅಭಿಯಂತರರು ಬೆಂಗಳೂರು ಅಬಿವೃದ್ಧಿ ಪ್ರಾಧಿಕಾರ ರವರಿಗೆ ಈ ದಿನ ಸಭೆಗೆ ಹಾಜರಾಗಲು ಸೂಚಿಸಿದ್ದರೂ ಸಹ ಸದರಿ ರವರು ಗೈರುಹಾಜರಾಗಿದ್ದು, ಈ ಕುರಿತು ಸಾರ್ವಜನಿಕರು ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಸಮಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕೈಗೊಳ್ಳಲು ಕೋರಿಕೊಂಡಿದ್ದು, ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

M. [signature]

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

[signature]

ಕಿರಿಯ ಅಭಿಯಂತರರು
ಹೊರಮಾವು ಉಪ-ವಿಭಾಗ
ಬಿ.ಬಿ.ಎಂ.ಪಿ

Scanned with CamScanner